ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹೊನ್ನಾಳಿ.

ಸಿಸಿ.ನಂ.1206/2015

ಪಿರ್ಯಾದುದಾರರು : ನ್ಯಾಮತಿ ಪೋಲೀಸ್ ಠಾಣೆ

ವಿರುದ್ಧ

ಆರೋಪಿತರು :
1. ಸಿದ್ದೇಶ ಬಿನ್ ಲೇಟ್ ಜಡಿಯಪ್ಪ, 32 ವರ್ಷ,
2. ಅಶೋಕ ಬಿನ್ ಲೇಟ್ ಜಡಿಯಪ್ಪ, 30 ವರ್ಷ,
3. ಚಿದಾನಂದ ಬಿನ್ ನೀಲಪ್ಪ ಯಾನೆ ನಾಗಪ್ಪ, 25 ವರ್ಷ,
4. ನೀಲಪ್ಪ ಯಾನೆ ನಾಗಪ್ಪ ಬಿನ್ ರಾಮಪ್ಪ, 48 ವರ್ಷ,
5. ಬಸವರಾಜ ಬಿನ್ ಜಯಪ್ಪ, 45 ವರ್ಷ,
6. ಶೇಖರಪ್ಪ ಬಿನ್ ನಾಗಪ್ಪ, 62 ವರ್ಷ,
7. ಅಮೃತ್ ಬಿನ್ ಮಲ್ಲಪ್ಪ, 20 ವರ್ಷ,
8. ಸುಭಾಶ್ ಯಾನೆ ಸುಬ್ಯ ಯಾನೆ ಸುಬ್ಯ ಬಿನ್ ನಾಗೇಶಪ್ಪ, 41 ವರ್ಷ,
9. ಪ್ರಕಾಶ ಬಿನ್ ಗಂಗಪ್ಪ, 39 ವರ್ಷ,
10. ಮಂಜಪ್ಪ ಬಿನ್ ಜಾಜೂರಪ್ಪ, 41 ವರ್ಷ,
11. ಅಣ್ಣಪ್ಪ ಬಿನ್ ಉಯ್ಯಾಲ ಸೋಮಣ್ಣ, 31 ವರ್ಷ,

ಆ-1 ರಿಂದ 6 ರವರ ವಾಸಃ ಮಾದಾಪುರ ಮೇಲಿನ ತಾಂಡ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

ಆ-7 ಮತ್ತು 8 ರವರ ವಾಸಃ ನೆಹರು ನಗರ, ಆನವಟ್ಟಿ ಗ್ರಾಮ, ಸೊರಬ ಗ್ರಾಮ, ಶಿವಮೊಗ್ಗ ಜಿಲ್ಲೆ.

ಆ-9 ರಿಂದ 11 ರವರ ವಾಸಃ ಕೊರಚರಹಟ್ಟಿ, ಚಿಕ್ಕಬೆನ್ನೂರು ಗ್ರಾಮ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

## ಭಾ. ದಂ. ಪ್ರ. ಸಂ. ಕಲಂ. 313 ರನ್ವಯ ಆರೋಪಿಗಳ ಹೇಳಿಕೆ

ಪ್ರಶ್ನೆ.1: ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿ ತಿಳಿದುಕೊಂಡಿದ್ದೀರಾ?

ಉತ್ತರ :

ಪ್ರಶ್ನೆ.2: ಪ್ರಾಸಾ.4 ವೆಂಕಟೇಶ ಮೂರ್ತಿ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ದಿಃ18.04.2015 ರಂದು ತಾನು ದಾವಣಗೆರೆಯಲ್ಲಿ ಕೆಲಸದಲ್ಲಿದ್ದಾಗ ತನ್ನ ತಂಗಿ ಚಾಸಾ 4 ರವರು ನೇಣು ಹಾಕಿಕೊಂಡಿರುತ್ತಾರೆ ಎಂದು ತನಗೆ ದೂರವಾಣಿ ಕರೆ ಬಂದ ಮೇರೆಗೆ ತಾನು ಸವಳಂಗದ ತಮ್ಮ ಮನೆಗೆ ಹೋದಾಗ ತನ್ನ ತಮ್ಮ ನರೇಂದ್ರ ಹಾಗೂ ಚಾಸಾ 5 ರವರು ತನ್ನ ತಂಗಿಯನ್ನು ಶಿವಮೊಗ್ಗದ ನಂಜಪ್ಪ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿರುವ ವಿಚಾರ ತಿಳಿದುಕೊಂಡು

ತಾನು ಶಿವಮೊಗ್ಗದ ನಂಜಪ್ಪ ಆಸ್ಪತ್ರೆಗೆ ಹೋಗಿ ನೋಡಿದಾಗ ಚಾಸಾ 4 ರವರಿಗೆ ಪ್ರಥಮ ಚಿಕಿತ್ಸೆ ನೀಡಿದ್ದು, ಹೆಚ್ಚಿನ ಚಿಕಿತ್ಸೆಗೆ ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ವೈದ್ಯರು ಹೇಳಿದ ಮೇರೆಗೆ ತಾವು ಚಾಸಾ 4 ರವರನ್ನು ಉಡುಪಿಯ ಮಣಿಪಾಲ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿರುತ್ತೇವೆ. 15-20 ದಿನ ಚಿಕಿತ್ಸೆ ಪಡೆದುಕೊಂಡ ನಂತರ ಚಾಸಾ 4 ರವರನ್ನು ಆಸ್ಪತ್ರೆಯವರು ಡಿಸ್ಚಾರ್ಜ್ ಮಾಡಿದ ಮೇರೆಗೆ ತಾನು ಚಾಸಾ 4 ರವರನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿರುತ್ತೇನೆ. ದಿಃ 23.07.2015 ರಂದು 1 ನೇ ಆರೋಪಿಯು ತಮ್ಮ ಮನೆಯ ಹತ್ತಿರ ಗಲಾಟೆ ಮಾಡುವ ಪ್ರಯತ್ನ ಮಾಡಿರುತ್ತಾರೆ.

ಮುಂದುವರೆದು ಸಾಕ್ಷಿಯು ಸದರಿ ವ್ಯಕ್ತಿಗಳು ತಮ್ಮ ಮನೆಗೆ ಬಂದು ಗಲಾಟೆ ವಿಚಾರ ಕೇಳಿ ರಾಜೀ ಸಂಧಾನ ಮಾಡಿಸಿರುತ್ತೇವೆ ಎಂದು ತನ್ನನ್ನು, ಚಾಸಾ 4 ರಿಂದ 7 ರವರನ್ನು ಸವಳಂಗದ ಮಿಕ್ಕಿದ ಮಾರಿಕಾಂಬ ದೇವಸ್ಥಾನದ ಹತ್ತಿರ ಕರೆದುಕೊಂಡು ಹೋಗಿರುತ್ತಾರೆ. 1 ನೇ ಆರೋಪಿಯು ತನ್ನ ತಲೆಗೆ ಹೊಡೆದಿರುತ್ತಾರೆ ತನಗೆ ಎಚ್ಚರ ಬಂದಾಗ ತಾನು ಮಣಿಪಾಲ್ ಆಸ್ಪತ್ರೆಯಲ್ಲಿದ್ದೆ ಎಂದು ಚಾಸಾ 4 ರವರು ಹೇಳಿದರು. 8 ನೇ ಆರೋಪಿಯು ರೊಚ್ಚಿಗೆದ್ದು ಗಲಾಟೆ ಶುರುಮಾಡಿದ್ದು, ಆರೋಪಿಗಳು ತಮ್ಮ ಮೇಲೆ ಗಲಾಟೆ ಮಾಡಿ, 11 ನೇ ಆರೋಪಿಯು ಕಲ್ಲಿನಿಂದ ಚಾಸಾ 7 ರವರ ಮುಖಕ್ಕೆ ಹೊಡೆದು ಗಾಯಗೊಳಿಸಿರುತ್ತಾರೆ. ಗಲಾಟೆಯ ಸಮಯದಲ್ಲಿ ಪೋಲೀಸರು ಬಂದು ಆರೋಪಿಗಳನ್ನು ವಶಕ್ಕೆ ಪಡೆದುಕೊಂಡು, ಹಲ್ಲೆಯಿಂದ ಗಾಯಗೊಂಡ ಚಾಸಾ 7 ರವರನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕಳುಹಿಸಿ ತಾನು ನ್ಯಾಮತಿ ಪೋಲೀಸ್ ಠಾಣೆಯಲ್ಲಿ ಪೋಲೀಸರಿಗೆ ದೂರು ಮತ್ತು ಮರುಹೇಳಿಕೆಯನ್ನು ನೀಡಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಛಿಸುತ್ತೀರಿ?

ಉತ್ತರ :

ಪ್ರಶ್ನೆ.3: ಪ್ರಾಸಾ.5 ವೆಂಕಟೇಶ್ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ 1 ನೇ ಆರೋಪಿ ಮತ್ತು ಚಾಸಾ 4 ರವರ ನಡುವೆ ಮದುವೆಯಾಗಿ 2 ವರ್ಷಗಳ ತನಕ ಚೆನ್ನಾಗಿದ್ದು, ನಂತರ ಸಣ್ಣ ಪುಟ್ಟ ವಿಚಾರಗಳಿಗೆ ಗಲಾಟೆಯಾಗಿರುತ್ತದೆ. ತಾನು, ಚಾಸಾ 1 ಮತ್ತು 5 ರವರು ಚಾಸಾ 4 ರವರಿಗೆ ಬುದ್ದಿಮಾತು ಹೇಳಿ 1 ನೇ ಆರೋಪಿಯ ಮನೆಗೆ ಕಳುಹಿಸಿಕೊಟ್ಟಿರುತ್ತೇವೆ. ಕೆಲವು ದಿನಗಳ ನಂತರ ಚಾಸಾ 4 ರವರು ಆತ್ಮಹತ್ಯೆಗೆ ಯತ್ನಿಸಿರುತ್ತಾರೆ ಎಂದು ಗೊತ್ತಾಗಿ ಶಿವಮೊಗ್ಗದ ನಂಜಪ್ಪ ಆಸ್ಪತ್ರೆಗೆ ಹೋಗಿ ನೋಡಿ, ಹೆಚ್ಚಿನ ಚಿಕಿತ್ಸೆಗೆ ಮಣಿಪಾಲ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಅಲ್ಲಿ ವಾಸಿಯಾದ ನಂತರ ಚಾಸಾ 4 ರವರನ್ನು ಮನೆಗೆ ಕರೆದುಕೊಂಡು ಹೋಗಿರುತ್ತೇವೆ. 1 ನೇ ಆರೋಪಿ ಮತ್ತು ಅವರ ಸಂಬಂಧಿಕರು ರಾಜೀ ಪಂಚಾಯತಿಗೆ ಬಂದಿದ್ದು, 1 ನೇ ಆರೋಪಿಯು ತನಗೆ ತಲೆಗೆ ಹೊಡೆದಿರುವುದು ಮಾತ್ರ ನೆನಪಿರುತ್ತದೆ ಎಂದು ನುಡಿಯುತ್ತಾರೆ.

ಮುಂದುವರೆದು ಸಾಕ್ಷಿಯು ಯಾಕೆ ಅಷ್ಟು ಸಲ ಒಂದೇ ಪ್ರಶ್ನೆ ಕೇಳುತ್ತಿದ್ದೀಯಾ ಎಂದು ತಾನು 8 ನೇ ಆರೋಪಿಯನ್ನು ಕೇಳಲಾಗಿ ಆತನು ತನ್ನ ಕೊರಳಪಟ್ಟಿ ಹಿಡಿದುಕೊಂಡು ಗಲಾಟೆ ಮಾಡಿದ, 11 ನೇ ಆರೋಪಿಯು ಕಲ್ಲಿನಿಂದ ತನ್ನ ಮುಖಕ್ಕೆ ಹೊಡೆದಿದ್ದು, ತಾನು ಕೆಳಗೆ ಬಿದ್ದಾಗ ಆರೋಪಿಗಳೆಲ್ಲರೂ ತನಗೆ ಹೊಡೆದು ಹಲ್ಲೆ ಮಾಡಿ, ಅವಾಚ್ಯ ಶಬ್ದಗಳಿಂದ ಬೈದಿದ್ದು, 1 ನೇ ಆರೋಪಿಯು ದೊಣ್ಣೆಯಿಂದ ತನಗೆ ಹೊಡೆದು ಗಾಯಗೊಳಿಸಿದ. ನಂತರ ತನ್ನನ್ನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. 3 ದಿನಗಳ ಚಿಕಿತ್ಸೆಯ ನಂತರ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿರುತ್ತೇನೆ. ಈ ಸಂಬಂಧ ತಾನು ಪೋಲೀಸರಿಗೆ ಹೇಳಿಕೆ ನೀಡಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಛಿಸುತ್ತೀರಿ?

ಉತ್ತರ :

ಪ್ರಶ್ನೆ.4: ಪ್ರಾಸಾ.6 ಜಿ.ಬಿ. ಬಾಸೂರ್ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ದಿಃ 27.07.2015 ರಂದು ತಾನು ಠಾಣಾ ಪ್ರಭಾರ ಕರ್ತವ್ಯದಲ್ಲಿದ್ದಾಗ ಸಂಜೆ 6.30 ರ ಸಮಯದಲ್ಲಿ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ, ಠಾಣಾ ಗುನ್ನೆ ನಂ.132/2015 ರಂತೆ ಪ್ರಕರಣವನ್ನು ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಪ್ರತಿಯನ್ನು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 13 ರವರಿಗೆ ನೀಡಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಛಿಸುತ್ತೀರಿ?

ಉತ್ತರ :

ಪ್ರಶ್ನೆ.5: ಪ್ರಾಸಾ.8 ತಿಪ್ಪೇಸ್ವಾಮಿ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ದಿಃ 27.07.2015 ರಂದು ಈ ಪ್ರಕರಣದ ಕಡತವನ್ನು ಚಾಸಾ 12 ರವರಿಂದ ಪಡೆದುಕೊಂಡು, ಚಾಸಾ 11 ಮತ್ತು ಇತರೇ ಸಿಬ್ಬಂದಿ 1 ರಿಂದ 3, 5 ಮತ್ತು 8 ಆರೋಪಿಗಳನ್ನು ವಶಕ್ಕೆ ಪಡೆದುಕೊಂಡು ತನ್ನ ಮುಂದೆ ಹಾಜರುಪಡಿಸಿದ ಮೇರೆಗೆ ವಿಚಾರಣೆ ಮಾಡಿ, ದಸ್ತಗಿರಿ ಕ್ರಮ ಜರುಗಿಸಿ, ಮೇಲೆ ಹೇಳಿದ ಆರೋಪಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ಅದೇ ದಿನ ಚಾಸಾ 2 ಮತ್ತು 3 ರವರಿಗೆ ನೋಟೀಸ್ ಜಾರಿ ಮಾಡಿ, ಸ್ಥಳ ಪಂಚನಾಮೆ ಜರುಗಿಸಿ, ಹಿಡಿಗಾತ್ರದ ಒಂದು ಕಾಡು ಜಾತಿಯ ಕಲ್ಲು, 2 ಅಡಿ ಉದ್ದದ ಕಾಡು ಕಟ್ಟಿಗೆಯ ದೊಣ್ಣೆಯನ್ನು ಅಮಾನತ್ತುಪಡಿಸಿಕೊಂಡು ಪೋಟೋ ತೆಗೆಸಿರುತ್ತೇನೆ. ಚಾಸಾ 4 ರಿಂದ 9 ರವರ ಹೇಳಿಕೆ ಮತ್ತು ಚಾಸಾ 1 ರವರ ಮರುಹೇಳಿಕೆ ಪಡೆದುಕೊಂಡಿರುತ್ತೇನೆ. ನಂತರ ಠಾಣೆಗೆ ಬಂದು ಕೃತ್ಯ ನಡೆದ ಸ್ಥಳದಲ್ಲಿ ವಶಪಡಿಸಿಕೊಂಡ ಮಾಲನ್ನು ಠಾಣಾ ಪಿಎಫ್ ನಲ್ಲಿ ಸೇರಿಸಿರುತ್ತೇನೆ. ಚಾಸಾ 7 ರವರ

ಗಾಯದ ಪ್ರಮಾಣ ಪತ್ರವನ್ನು ಚಾಸಾ 10 ರವರಿಂದ ಪಡೆದುಕೊಂಡಿರುತ್ತೇನೆ. ಚಾಸಾ 1 ರವರಿಗೆ ಪೋಲೀಸ್ ನೋಟೀಸ್ ಜಾರಿ ಮಾಡಿದ್ದು, ಆರೋಪಿಯ ವಿರುದ್ಧ ತನಿಖೆ ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಚಿಸುತ್ತೀರಿ?

ಉತ್ತರ :

ಪ್ರಶ್ನೆ.6: ಪ್ರಾಸಾ.9 ಡಾ. ರಾಮಚಂದ್ರಚಾರ್ ರವರು ತಮ್ಮ ಮುಖ್ಯ ವಿಚಾರಣೆಯ ಸಾಕ್ಷ್ಯದಲ್ಲಿ ದಿನಾಂಕಃ 27.07.2015 ರಂದು ರಾತ್ರಿ 9.41 ಗಂಟೆಗೆ ಚಾಸಾ-7 ರವರು ಹಲ್ಲೆಯ ಇತಿಹಾಸದಲ್ಲಿ ಚಿಕಿತ್ಸೆ ಪಡೆಯಲು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಬಂದಿದ್ದು, ತಾನು ಅವರನ್ನು ಪರೀಕ್ಷಿಸಿದಾಗ ಅವರಿಗೆ ಬಲಕಣ್ಣಿನ ಕೆಳಭಾಗದಲ್ಲಿ 1 x 0.5 ಸೆ. ಮೀ ಹರಿತ ಗಾಯವಾಗಿದ್ದು, ಸದರಿ ಗಾಯ ಸಾಮಾನ್ಯ ಸ್ವರೂಪದ ಗಾಯ ಎಂದು ಅಭಿಪ್ರಾಯಪಟ್ಟಿರುತ್ತೇನೆ. ಈ ಬಗ್ಗೆ ಗಾಯದ ಪ್ರಮಾಣ ಪತ್ರವನ್ನು ನೀಡಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನಿವೇನು ಹೇಳಲು ಇಚ್ಚಿಸುತ್ತೀರಿ?

ಉತ್ತರ :

ಪ್ರಶ್ನೆ.7: ನೀವು ಹೇಳುವುದು ಏನಾದರೂ ಇದೆಯೇ ?

ಉತ್ತರ :

ಆ 1). ಆ 2). ಆ 3).

ಆ 4). ಆ 5). ಆ 6).

ಆ 7). ಆ 8). ಆ 9).

ಆ 10). ಆ 11).

ಪ್ರಶ್ನೆ.8: ನಿಮ್ಮ ಪರ ಯಾರಾದರೂ ಸಾಕ್ಷಿದಾರರನ್ನು ವಿಚಾರಣೆ ಮಾಡಿಕೊಳ್ಳುವಿರಾ ?

ಉತ್ತರ :

ಆ 1). ಆ 2). ಆ 3).

ಆ 4). ಆ 5). ಆ 6).

ಆ 7).　　　　ಆ 8).　　　　ಆ 9).

ಆ 10).　　　　ಆ 11).

(ಸಾಕ್ಷಿ ವಿಚಾರಣೆಯಲ್ಲಿ ಕಂಡು ಬಂದ ಅಂಶಗಳ ಸಂಕ್ಷಿಪ್ತ ವಿವರಗಳನ್ನು ಆರೋಪಿಗಳಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರು ಹೇಳಿದಂತೆ ಉತ್ತರಗಳನ್ನು ಬರೆದುಕೊಳ್ಳಲಾಯಿತು ಎಂದು ದೃಢೀಕರಿಸುತ್ತೇನೆ).

ಸ್ಥಳ : ಹೊನ್ನಾಳಿ

ದಿನಾಂಕ: 02.04.2026.

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹೊನ್ನಾಳಿ.